

# ಮಹಿಳೆಯರಿಂದ ಚಿತ್ರರಸಿಕರಿಗಾಗಿ...

“ನಾನು ನಿಮಗೆ ಭರವಸೆ ಕೊಡುತ್ತೇನೆ. ನೋಡುಗರ ನಿರೀಕ್ಷೆಯನ್ನು ನಾವು ಹುಸಿಗೊಳಿಸುವುದಿಲ್ಲ. ನಾವು ಒಳ್ಳೆಯ ಚಿತ್ರವನ್ನು ಮಾಡಿದ್ದೇವೆ. ಆ ಬಗ್ಗೆ ಯಾರಿಗೂ ಅನುಮಾನ ಬೇಕಿಲ್ಲ”.

ಚೊಚ್ಚಿಲ ನಿರ್ದೇಶನದ ಪುಳಕ ಮತ್ತು ಆತಂಕ ಎರಡನ್ನೂ ಅನುಭವಿಸುತ್ತಿರುವ ಯುವ ನಿರ್ದೇಶಕಿ ಪ್ರಿಯಾ ಬೆಳ್ಳಿಯಪ್ಪ ಅವರ ಆತ್ಮವಿಶ್ವಾಸದ ಮಾತುಗಳಿವು. ಪ್ರಿಯಾ ‘ರಿಂಗ್ ರೋಡ್ ಶುಭಾ’ ಚಿತ್ರದ ನಿರ್ದೇಶಕಿ. ಇಷ್ಟು ಮಾತ್ರ ಹೇಳಿದರೆ, ಸಿನಿಮಾದ ವಿಶೇಷ ಹೇಳಿದಂತಾಗುವುದಿಲ್ಲ. ಇದೇ ಮೊದಲ ಬಾರಿಗೆ, ಸಂಪೂರ್ಣವಾಗಿ ಮಹಿಳಾ ತಂತ್ರಜ್ಞರೇ ತೊಡಗಿಕೊಂಡು ರೂಪಿಸಿರುವ ಚಿತ್ರ ಇದು. ಹಾಗೆಂದು, ಇದು ಮಹಿಳೆಯರ ಚಿತ್ರ ಎನ್ನುವ ಕಾರಣಕ್ಕಾಗಿ ಪ್ರಿಯಾ ರಿಯಾಯಿತಿ ಬೇಡುತ್ತಿಲ್ಲ. ‘ಮಹಿಳೆಯರ ಚಿತ್ರ ಎನ್ನುವುದು ಸಿನಿಮಾದ ಒಂದು ವಿಶೇಷವಷ್ಟೇ. ಆದರೆ, ಗುಣಮಟ್ಟದ ವಿಷಯದಲ್ಲಿ ಇದು ಮೀಸಲಾತಿ ಅಪೇಕ್ಷಿಸುವ ಚಿತ್ರವಲ್ಲ’ ಎನ್ನುವುದು ಅವರ ಸ್ಪಷ್ಟನೆ. ಅಂದಹಾಗೆ, ಹೀಗೆ ಮಹಿಳಾಮಣಿಗಳ ಗುಂಪೊಂದು ಚಿತ್ರವೊಂದನ್ನು ಪೂರೈಸಿರುವುದು ಕನ್ನಡದಲ್ಲಿ ಮಾತ್ರವಲ್ಲ, ಭಾರತೀಯ ಚಿತ್ರರಂಗದಲ್ಲೇ ಒಂದು ವಿಶಿಷ್ಟ ದಾಖಲೆ. ಆ ಕಾರಣಕ್ಕಾಗಿ ಕೂಡ ‘ರಿಂಗ್ ರೋಡ್ ಶುಭಾ’ಳನ್ನು ಸಹೃದಯರು ಕುತೂಹಲದಿಂದ ಗಮನಿಸುವಂತಾಗಿದೆ.


ಪ್ರಿಯಾ ಬೆಳ್ಳಿಯಪ್ಪ

ಶುಭಾಳ ತಂಡ ಸೊಗಸಾಗಿದೆ. ಕನ್ನಡದ ಕಥಾಲೋಕದ ಒಳ್ಳೆಯ ಕಥೆಗಾರರಲ್ಲೊಬ್ಬರಾದ ರೇಖಾರಾಣಿ ಈ ಚಿತ್ರಕ್ಕೆ ಸಾಹಿತ್ಯ ಒದಗಿಸಿದ್ದಾರೆ. ಸಂಗೀತ ನಿರ್ದೇಶನ ವಾಣಿ ಹರಿಕೃಷ್ಣಾ ಅವರದು. ರಂಜಿನಿ ರವೀಂದ್ರ ಚಿತ್ರದ ನಿರ್ಮಾಣದ ಹೊಣೆ ಹೊತ್ತಿದ್ದಾರೆ. ಉಳಿದಂತೆ ಛಾಯಾಗ್ರಹಣ, ಸಂಕಲನ, ಕಲಾ ನಿರ್ದೇಶನ, ವಸ್ತ್ರವಿನ್ಯಾಸ, ನೃತ್ಯ ಸಂಯೋಜನೆ– ಹೀಗೆ, ಚಿತ್ರದ ಎಲ್ಲ ವಿಭಾಗಗಳ ಮುಂಚೂಣಿಯಲ್ಲಿ ಹೆಣ್ಣುಮಕ್ಕಳೇ ಇದ್ದಾರೆ. ಡೆಹ್ರಾಡೂನ್‌ನ ಖುಷಿ ಎನ್ನುವ ಚೆಲುವೆ ತಾರಾಗಣದ ಕೇಂದ್ರದಲ್ಲಿದ್ದಾರೆ. ಹಾಗೆಂದು, ಇದನ್ನು ‘ಮಹಿಳೆಯರು ಮಹಿಳೆಯರಿಗಾಗಿ ಮಾಡಿದ ಸಿನಿಮಾ’ ಎಂದು ಬಣ್ಣಿಸಿದರೆ, ಚಿತ್ರಕ್ಕೆ ಅನ್ಯಾಯ ಮಾಡಿದಂತೆ. ಇದು, ಮಹಿಳೆಯರು ಎಲ್ಲ ಚಿತ್ರರಸಿಕರಿಗಾಗಿ ಮಾಡಿದ ಸಿನಿಮಾ!

ಶುಭಾ ಎನ್ನುವ ಹುಡುಗಿ ತಾನು ಮದುವೆಯಾಗಿದ್ದ ಹುಡುಗನನ್ನು ಕೊಲ್ಲಿಸಿದ ಘಟನೆ ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದಿತ್ತು. ಈ ಘಟನೆಯೇ ‘ರಿಂಗ್ ರೋಡ್ ಶುಭಾ’ ಚಿತ್ರಕ್ಕೆ ಪ್ರೇರಣೆ. ಈ ಘಟನೆಯ ಎಳೆಗೆ ಹಲವಾರು ಸತ್ಯ ಘಟನೆಗಳನ್ನು ಸೇರಿಸಿ ಚಿತ್ರದ ಕಥೆಯನ್ನು ಹೆಣೆಯಲಾಗಿದೆಯಂತೆ. ‘ಇದೊಂದು ಪೂರ್ಣ ಪ್ರಮಾಣದ ಮನರಂಜನಾತ್ಮಕ ಚಿತ್ರ’ ಎಂದು ಪ್ರಿಯಾ ಹೇಳುತ್ತಾರೆ.

ಅಂದಹಾಗೆ, ದೃಶ್ಯ ಮಾಧ್ಯಮ ಪ್ರಿಯಾ ಅವರಿಗೆ ಅಪರಿಚಿತವೇನೂ ಅಲ್ಲ. ಈ ಮೊದಲು ಜಾಹೀರಾತು ಕ್ಷೇತ್ರದಲ್ಲಿ ಅವರು ದುಡಿದಿದ್ದಾರೆ. ಸಿನಿಮಾ ನಿರ್ದೇಶಕಿ ಆಗಬೇಕು ಎನ್ನುವ ಹಂಬಲದಿಂದ ತರಬೇತಿಯನ್ನೂ ಪಡೆದಿದ್ದಾರೆ. ಈ ಮೊದಲು ‘ಕೆಟ್ಟವನು’ ಎನ್ನುವ ಚಿತ್ರವೊಂದನ್ನು ಅವರು ನಿರ್ದೇಶಿಸಬೇಕಿತ್ತು. ಆದರೆ, ಒಲಿದು ಬಂದುದು ಶುಭಾಳ ಕಥನ. ಸ್ತ್ರೀಕೇಂದ್ರಿತ ಕಥನವನ್ನು ನಿರ್ದೇಶಕಿಯೊಬ್ಬಳು ಕೈಗೆತ್ತಿಕೊಂಡಿದ್ದೇ ತಡ, ಕಾಕತಾಳೀಯ ಎನ್ನುವಂತೆ ಹಲವು ಮಹಿಳೆಯರು ಜೊತೆಯಾದರು. ಕೊನೆಗೆ, ಇಡೀ ಸಿನಿಮಾ ಮಹಿಳಾ ತಂತ್ರಜ್ಞರಿಂದ ರೂಪುಗೊಂಡಿತು.

‘ಮಹಿಳಾ ವಿಶೇಷ’ ಸಿನಿಮಾದ ಬೆಂಬಲಕ್ಕೆ ಚಿತ್ರರಂಗದ ಹಲವರು ಮುಂದಾಗಿರುವುದು ಮತ್ತೊಂದು ವಿಶೇಷ. ದುನಿಯಾ ವಿಜಯ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಖಿತಾ ಕೂಡ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುವ ಮೂಲಕ ಚಿತ್ರತಂಡದ ಬೆನ್ನುತಟ್ಟಿದ್ದಾರೆ. ನಟ ಪ್ರೇಮ್ ಹಾಡೊಂದರಲ್ಲಿ ಕುಣಿದಿದ್ದಾರೆ. ಸುದೀಪ್ ಕೂಡ ಗೀತೆಯೊಂದಕ್ಕೆ ದನಿಯಾಗುವ ಮೂಲಕ ಸ್ತ್ರೀಪ್ರೇಮ ವ್ಯಕ್ತಪಡಿಸಿದ್ದಾರೆ.

★ ರಚಹ